ತಲ್ಲಣಿಸಿತು. ಆದರೆ ಬರುಬರುತ್ತಾ ಗೋವಾ ಹೋರಾಟ ಕ್ಷೀಣಿಸಿತು. ಹದಿನೈದು ವರ್ಷಗಳ ನಂತರ ನೆಹರು ಅವರೇ ಭಾರತೀಯ ಸೈನ್ಯದ ಮೂಲಕ ಗೋವಾವನ್ನು ಸ್ವತಂತ್ರಗೊಳಿಸಬೇಕಾಯಿತು. 19 ಡಿಸೆಂಬರ್ 1961ರಂದು ಗೋವಾ ಸ್ವತಂತ್ರವಾಯಿತು.

ಲೋಹಿಯಾ ಗೋವಾ ಸ್ವಾತಂತ್ರ್ಯ ಚಳುವಳಿಯನ್ನು ಉದ್ಘಾಟಿಸಿದ ನೆನಪಿಗೆ ಇವತ್ತಿಗೂ ಜೂನ್ 18ರಂದು 'ಗೋವಾ ಕ್ರಾಂತಿ ದಿನ'ವನ್ನು ಆಚರಿಸಲಾಗುತ್ತದೆ.

ಪ್ರಮುಖ ರಾಷ್ಟ್ರೀಯ ನಾಯಕರು ಸರ್ಕಾರ ರಚನೆ ಹಾಗೂ ಅಧಿಕಾರದ ಬೆನ್ನು ಹತ್ತಿದ್ದ ಆ ಕಾಲದಲ್ಲಿ ಲೋಹಿಯಾ ಗಾಂಧೀಜಿಯ ಮನಸ್ಸಿಗೆ ಹತ್ತಿರವಾಗತೊಡಗಿದರು. ಭಾರತದ ವಿಭಜನೆಯನ್ನು ವಿರೋಧಿಸಿದ ಗಾಂಧೀಜಿಯ ಜೊತೆ ಲೋಹಿಯಾ, ಜೆ.ಪಿ., 'ಗಡಿನಾಡು ಗಾಂಧಿ' ಖಾನ್ ಅಬ್ದುಲ್ ಗಫಾರ್‌ಖಾನ್ ಅಚಲವಾಗಿ ನಿಂತರು. ಭಾರತವನ್ನು ಒಡೆದೇ ಇಲ್ಲಿಂದ ಹೊರಡಬೇಕೆನ್ನುವ ಬ್ರಿಟಿಷರ ಒಡೆದಾಳುವ ಸಂಚಿನಿಂದ ಮೊಳೆತ ವಿಭಜನೆಯ ಬೀಜಗಳು, ಕಾಂಗ್ರೆಸ್, ಮುಸ್ಲಿಂ ಲೀಗ್‌ಗಳ ಅಧಿಕಾರ ದಾಹ, ಹಿಂದೂ ಮತೀಯತೆ, ಮುಸ್ಲಿಂ ಮತೀಯತೆಯನ್ನು ಹಬ್ಬಿಸುತ್ತಿದ್ದ ಕೋಮುವಾದಿ ಸಂಘಟನೆಗಳ ಹುನ್ನಾರ ಎಲ್ಲವನ್ನೂ ಲೋಹಿಯಾ ಕಂಡರು. ಈ ಘಟ್ಟದಲ್ಲಿ ಏಕಾಂಗಿಯಾದ ಗಾಂಧೀಜಿಗೆ ಲೋಹಿಯಾರ ನೇರ ನಡೆ, ನುಡಿಯ ಗಟ್ಟಿ ವ್ಯಕ್ತಿತ್ವ ಪ್ರಿಯವಾಗತೊಡಗಿತು.

ಈ ಘಟ್ಟದಲ್ಲಿ 'ಗಾಂಧೀಜಿ ನನ್ನನ್ನು ಇಷ್ಟಪಡುತ್ತಿದ್ದರಲ್ಲದೆ, ನನ್ನಿಂದ ಕೆಟ್ಟ ಕೆಲಸಗಳಿಗಿಂತ ಒಳ್ಳೆಯ ಕೆಲಸವೇ ನಡೆಯುತ್ತದೆಂಬ ನಂಬಿಕೆಯನ್ನೂ ಇಟ್ಟುಕೊಂಡಿದ್ದರು. ಅದು ನನ್ನನ್ನು ಒಂದು ಬಗೆಯ ಬದ್ಧತೆಯಲ್ಲೂ ಸಿಲುಕಿಸಿತು' ಎಂದು ಲೋಹಿಯಾ ಬರೆಯುತ್ತಾರೆ.

24 ಆಗಸ್ಟ್ 1946. ದೇಶದಲ್ಲಿ ಮಧ್ಯಂತರ ಸರ್ಕಾರ ರಚನೆಯಾಯಿತು. ಕೋಮುದ್ವೇಷ ಹೆಚ್ಚತೊಡಗಿತು. ಅಕ್ಟೋಬರ್‌ನಲ್ಲಿ ಬಂಗಾಳದ ನೌಖಾಲಿಯಲ್ಲಿ ಕೋಮುದಳ್ಳುರಿ ಎದ್ದಿತು. ಆಗ ದೆಹಲಿಯ ಭಂಗಿ ಕಾಲನಿಯಲ್ಲಿ ವಾಸಿಸುತ್ತಿದ್ದ ಗಾಂಧೀಜಿ ಕೋಮುಗಲಭೆ ಸ್ಫೋಟಗೊಂಡಾಗ 'ಬಂಗಾಳದ ಮಹಿಳೆಯರ ಕಣ್ಣೀರೊರೆಸಲು' ನೌಖಾಲಿಗೆ ಹೊರಟರು.

ಲೋಹಿಯಾ ಕೋಮುಗಲಭೆಗೆ ತುತ್ತಾಗಿದ್ದ ಬಂಗಾಳದ ಚಿತ್ತಗಾಂವ್‌ಗೆ ಹೋದರು. ಮುಸ್ಲಿಂ ಲೀಗ್ ಲೋಹಿಯಾ ಆಗಮನವನ್ನು, ಅವರ ಸಭೆಯನ್ನು ವಿರೋಧಿಸಿತು. ಲೋಹಿಯಾ ವೇದಿಕೆಯ ಮೇಲಿದ್ದರು. ಇಟ್ಟಿಗೆಗಳ ಎಸೆತ ಶುರುವಾಯಿತು. ಮೂವರು ಸಮಾಜವಾದಿ ಸಂಗಾತಿಗಳು ಲೋಹಿಯಾ ಸುತ್ತ ನಿಂತರು: 'ಅವರು ಒಂದೊಂದು ಇಟ್ಟಿಗೆ ಎಸೆದಾಗಲೂ ಅದು ಹೇಗೆ ನನ್ನ ತಲೆ ಥಟ್ಟನೆ ವಾಲಿ ತಪ್ಪಿಸಿಕೊಳ್ಳುತ್ತಿತ್ತು ಎಂಬುದನ್ನು ನೆನಸಿಕೊಂಡರೆ ಆಶ್ಚರ್ಯವಾಗುತ್ತದೆ' ಎಂದು ಲೋಹಿಯಾ ಮುಂದೊಮ್ಮೆ ಹೇಳಿದರು.

ಲೋಹಿಯಾ ನೌಖಾಲಿಯಲ್ಲಿ ಗಾಂಧೀಜಿ ನಡೆಸುತ್ತಿದ್ದ ಶಾಂತಿಯಾತ್ರೆಯಲ್ಲೂ ಭಾಗಿಯಾದರು.

## ಕಳೆದ ಸಂಚಿಕೆಯಲ್ಲಿ



ಲಾಹೋರ್ ಸೆರೆಮನೆಯಲ್ಲಿ ಅನುಭವಿಸಿದ ಚಿತ್ರಹಿಂಸೆಯಿಂದ ಲೋಹಿಯಾ ಅವರ ಚೈತನ್ಯ ಉಡುಗದೆ, ಅದು ಮತ್ತಷ್ಟು ಸೃಜನಶೀಲವಾಗಿ ಪ್ರಕಟಗೊಳ್ಳತೊಡಗಿತು. ಸ್ವಾತಂತ್ರ್ಯ ಚಳುವಳಿಯ ನಾಳೆಗಳ ಜೊತೆಗೆ ಮನುಷ್ಯಕುಲದ ಭವಿಷ್ಯದ ಕುರಿತೂ ಲೋಹಿಯಾ ಯೋಚಿಸತೊಡಗಿದ್ದರು. ಭಯ, ಆಶೆ, ಹತಾಶೆಗಳ ಜೊತೆಗೆ ಆತ್ಯಂತಿಕ ವಿಮುಕ್ತಿಯ ಚಿಂತನೆಗಳು ಅವರ ಮನಸ್ಸನ್ನು ಕಾಡತೊಡಗಿದ್ದವು. ಜೈಲು ಸೇರುವುದಕ್ಕೆ ಮೊದಲು ಅಂದಿನ ವೈಸ್‌ರಾಯ್ ಲಿನ್‌ಲಿತ್‌ಗೌಗೆ ಲೋಹಿಯಾ ಬಹಿರಂಗ ಪತ್ರ ಬರೆದಿದ್ದರು. ಆ ಪತ್ರ ಗಾಂಧೀಜಿಗೆ ಇಷ್ಟವಾಗಿತ್ತು. ಭಾರತದ ನಿರಾಯುಧ ಸಾಮಾನ್ಯ ಜನರ ಚರಿತ್ರೆ ಆಗಸ್ಟ್ ೯ರ ಕ್ರಾಂತಿಯಿಂದ ಆರಂಭವಾಯಿತು ಎಂದು ಲೋಹಿಯಾ ಅಭಿಪ್ರಾಯಪಟ್ಟಿದ್ದರು. ಲೋಹಿಯಾರ ತಂದೆ ಹೀರಾಲಾಲ್ ಅನಾರೋಗ್ಯಕ್ಕೊಳಗಾದುದು ಅವರ ಪತ್ರಗಳಿಂದ ತಿಳಿಯುತ್ತಿತ್ತು. ಸ್ವಾತಂತ್ರ್ಯ ಚಳುವಳಿಯ ಬಹುತೇಕ ನಾಯಕರನ್ನು ಬಿಡುಗಡೆ ಮಾಡಿದ್ದ ಬ್ರಿಟಿಷ್ ಸರ್ಕಾರಕ್ಕೆ ಲೋಹಿಯಾ ಮತ್ತು ಜೆ.ಪಿ. ಬಗ್ಗೆ ಜನಮಾನಸದಲ್ಲಿ ರೂಪುಗೊಂಡಿದ್ದ ಅಭಿಮಾನ ಮತ್ತು ಪ್ರೀತಿಯ ಬಗ್ಗೆ ಚಿಂತೆ ಶುರುವಾಗಿತ್ತು.

ಗಾಂಧೀಜಿಯ ಮೇಲೆ ಹಲ್ಲೆಯಾದಾಗ ಅವರನ್ನು ರಕ್ಷಿಸಲೆತ್ನಿಸಿದ ಲೋಹಿಯಾಗೆ ಹೊಡೆತಗಳು ಬಿದ್ದವು. ಗಾಂಧೀಜಿ ಈ ಕಾಲದಲ್ಲಿ ಲೋಹಿಯಾ ಕಲ್ಕತ್ತಾದಲ್ಲೇ ಇರಬೇಕೆಂದು ಬಯಸಿದರು:

'ನಾನು ಈ ಸಂದರ್ಭದಲ್ಲಿ ಕಲ್ಕತ್ತಾದಲ್ಲಿರಬೇಕೆಂದು ಅವರು ಪದೇಪದೇ ಹೇಳಿದಾಗ, ಮೊದಮೊದಲು ಒಲ್ಲೆನೆಂದೆ. ಹಿಂದೂ–ಮುಸ್ಲಿಮರ ರಕ್ತಪಾತದ ನಡುವೆ ನಾನೇನೂ ಮಾಡಲಾರನೆಂಬ ಅಳುಕು ನನಗಿತ್ತು. ಕೊನೆಗೆ ಅಲ್ಲಿಗೆ ಹೋಗಲು ಒಪ್ಪಿದ ಮೇಲೆ ಅವರನ್ನು ಕೇಳಿದೆ:

'ಅಲ್ಲಿ ನಾನು ಏನು ಮಾಡಬೇಕೆನ್ನುತ್ತೀರಿ?'

'ನೀವು ಏನು ಮಾಡಬೇಕೆಂದು ನಾನು ಹೇಳಬೇಕಾಗಿಲ್ಲ; ನಿಮಗೆ ಯಾವುದು ಅತ್ಯುತ್ತಮವೆಂದು ಕಾಣುತ್ತದೋ ಅದನ್ನು ಮಾಡಬಹುದು... ಅಲ್ಲಿರುವ ನಿಮ್ಮ ಹಳೆಯ ಮುಸಲ್ಮಾನ್ ಮಿತ್ರರನ್ನು ಹುಡುಕಿ, ಅವರ ಮನೆಗಳಿಗೆ ಹೋಗಿ ಭೇಟಿ ಮಾಡಿ. ನಿಮ್ಮ ಮೈತ್ರಿಯನ್ನು ಮತ್ತೆ ಜೀವಂತಗೊಳಿಸಿ.'

ಇದು ತೀರ ಮಾಮೂಲಿ ಕೆಲಸ ಅನ್ನಿಸಬಹುದು. ಆದರೆ ಅದು ಹಾಗಿರಲಿಲ್ಲ. ಆಗ ಇಡೀ ಕಲ್ಕತ್ತಾ ಎರಡು ಯುದ್ಧಭೂಮಿಗಳೆಂಬಂತೆ ಹಂಚಿಹೋಗಿತ್ತು. ಒಂದು ಮುಸಲ್ಮಾನರದು, ಮತ್ತೊಂದು ಹಿಂದೂಗಳದ್ದು. ಆಗ ಒಬ್ಬ ಹಿಂದೂ ವ್ಯಕ್ತಿ ಮುಸ್ಲಿಮರ ಮೊಹಲ್ಲಾದಲ್ಲಿ ಹೋಗುವುದಾಗಲೀ ಒಬ್ಬ ಮುಸಲ್ಮಾನನು ಹಿಂದೂಗಳ ಮೊಹಲ್ಲಾದಲ್ಲಿ ಕಾಲಿರಿಸುವುದಾಗಲೀ ತುಂಬಾ ಕಷ್ಟದ ಕೆಲಸವಾಗಿತ್ತು.

ಕಲ್ಕತ್ತಾದಲ್ಲಿ ನನ್ನ ಹಳೆಯ ಮುಸ್ಲಿಂ ಗೆಳೆಯರು ಅನೇಕರಿದ್ದರು. ನಾನು ಅವರನ್ನು ಪತ್ತೆ ಹಚ್ಚುವ ಪ್ರಯತ್ನ ಆರಂಭಿಸಿದೆ. ಯಾರನ್ನಾದರೂ ನಾನು ಅವರ ಮನೆಗಳಿಗೆ ಕಳಿಸಿದಾಗಲೆಲ್ಲ ಒಂದೇ ರೀತಿಯ ಉತ್ತರ ಬರುತ್ತಿತ್ತು. 'ಅವರು ಕಲ್ಕತ್ತಾದಿಂದ ಹೊರಗೆ ಹೋಗಿದ್ದಾರೆ', 'ಅವರು ಮನೆಯಲ್ಲಿಲ್ಲ', 'ಅವರೇ ಬಂದು ಕಾಣುತ್ತಾರೆ' ಇತ್ಯಾದಿ. ಐದಾರು ದಿನ ಇದೇ ನಡೆಯಿತು. ನನಗೆ ನಿರಾಶೆಯಾಯಿತು.

ನನ್ನ ಒಬ್ಬ ಮುಸ್ಲಿಂ ಗೆಳೆಯನನ್ನು ಕೂಡ ಕಾಣುವುದು ಅಸಾಧ್ಯವಾದಾಗ, ನಾನು ಅವರಿಗೆ ಯಾವ ಸೂಚನೆಯನ್ನೂ ಕೊಡದೆ, ನೇರವಾಗಿ ಅವರಿರುವ ಕಡೆಗೆ ಹೊರಟೆ.

...ಅವತ್ತು ನಾನು ಆ ಮುಸ್ಲಿಂ ಮೊಹಲ್ಲಾದಲ್ಲಿ ಕಾಲಿಟ್ಟಾಗ, ವಾತಾವರಣದಲ್ಲಿ ತೀವ್ರ ಭಾವನೆಗಳು ಹರಿದಾಡುತ್ತಿದ್ದಂತೆ ಭಾಸವಾಯಿತು. ಅದು ಯಾಕೆಂದು ನನಗೆ ತಿಳಿದೇ ಇತ್ತು: ಆಗ ಯಾವುದೇ ಒಬ್ಬ ಮುಸಲ್ಮಾನ ಯಾವುದೇ ಹಿಂದೂ ಮೊಹಲ್ಲಾಕ್ಕೆ ಹೋದರೂ ಇಷ್ಟೇ ಕೋಪ ತುಂಬಿದ ಮುಖಗಳನ್ನು ಕಾಣಬೇಕಾಗುತ್ತಿತ್ತು. ನನಗೂ ಒಳಗೊಳಗೇ ಒಂದು ಬಗೆಯ ಅಳುಕು ಇದ್ದುದರಿಂದಲೋ ಏನೋ, ಯಾರಾದರೂ ಅಂಥವರು ಎದುರು ಬಂದೊಡನೆ ಮುಗುಳ್ನಗುತ್ತಿದ್ದೆ.

ತುಂಬಾ ಕೋಪಗೊಂಡ ಮುಖವೊಂದು ಎದುರು ಬಂದಾಗ, ನಾನು ಯಾರನ್ನು ಕಾಣಬೇಕೆಂದು ಹೊರಟಿದ್ದೆನೋ ಆ ಸ್ನೇಹಿತರ ಮನೆಯ ಬಗ್ಗೆ ಆ ವ್ಯಕ್ತಿಯನ್ನೇ ಕೇಳಿಬಿಡುತ್ತಿದ್ದೆ. ನನ್ನ ಈ ಪುಟ್ಟ ವಾಕ್ಯದ ಕಾರಣದಿಂದಾಗಿ ಅಲ್ಲಿಯ ವಾತಾವರಣ ಸ್ವಲ್ಪಮಟ್ಟಿಗೆ ತಿಳಿಗೊಳ್ಳುತ್ತಿತ್ತು. ಏನಾದರೇನು, ನಾವೆಲ್ಲರೂ ಮನುಷ್ಯರೇ! ಯಾವುದೇ ವ್ಯಕ್ತಿಯನ್ನು ಮುಗುಳುನಗೆಯೊಡನೆ ನೀವು ಮಾತಾಡಿಸಿದರೆ ಅಥವಾ ನೇರವಾದ ಸಾಮಾನ್ಯ ಪ್ರಶ್ನೆ ಕೇಳಿದರೆ ನಿಮಗೆ ಯೋಗ್ಯ ಹಾಗೂ ಮಾನವೀಯ ಪ್ರತಿಕ್ರಿಯೆಯೇ ಸಿಗುತ್ತದೆ. ಆದರೂ ಇದು ನೂರಕ್ಕೆ ನೂರರಷ್ಟು ಗ್ಯಾರಂಟಿ ಎಂದೇನೂ ಹೇಳಲಾರೆ!

ಆದರೂ ಈ ಬಗೆಯ ಮಾನವೀಯತೆಯೇ ಕುಸಿದು ಹೋಗಿದ್ದರೆ, ಇವತ್ತು ನಾನಿದನ್ನೆಲ್ಲ ಹೇಳಲು ಉಳಿದುಕೊಂಡಿರುತ್ತಿರಲಿಲ್ಲವೇನೋ! ನನ್ನ ಪ್ರಯತ್ನ ಫಲ ಕೊಟ್ಟಿತು. ನನಗೆ ದಾರಿಯ ಒಂದು ಭಾಗವನ್ನಾದರೂ ತೋರಿಸುವ ಒಳ್ಳೆಯ ವ್ಯಕ್ತಿಗಳೂ ಸಿಗುತ್ತ ಹೋದರು. ನಾನು ಹುಡುಕುತ್ತಿದ್ದ ಮನೆಯೊಂದರ ಬಳಿಗೆ ನನ್ನನ್ನು ಕರೆದೊಯ್ಯಬಲ್ಲ ಬಾಲಕನೊಬ್ಬ ನನಗೆ ಸಿಕ್ಕಿದ. ಆ ಮನೆ ಕಲ್ಕತ್ತಾದ ಮುಸ್ಲಿಂ ವಿದ್ಯಾರ್ಥಿಗಳ ಕೇಂದ್ರವಾಗಿತ್ತು.

ಆ ವಿದ್ಯಾರ್ಥಿಗಳೊಡನೆ ನಾನು ಎರಡು ಗಂಟೆಗಳ ಕಾಲ ಚರ್ಚೆ ಮಾಡಿದೆ; ನಾನು ಹಿಂದೂ ವಿದ್ಯಾರ್ಥಿಗಳೊಡನೆ ಚರ್ಚಿಸುವ